**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ**

**ಸಿ.ಸಿ. ನಂ. 31/2024**

ಪಿರ್ಯಾದಿ : ಸರಕಾರದ ಪರವಾಗಿ
ಪೋಲಿಸ್ ನಿರೀಕ್ಷಕರು,
ಹೊನ್ನಾವರ ಪೊಲೀಸ್ ಠಾಣೆ, ಹೊನ್ನಾವರ

**–ವಿರುದ್ಧ –**

ಆರೋಪಿಃ ಇಮ್ರಾನ್ ಖಾನ್ ವಹಾಜುಲ್ ಹಕ್ ಖಾನ್,
ವಯಸ್ಸುಃ 45 ವರ್ಷಗಳು,
ಉದ್ಯೋಗಃ ಕಂಪನಿಯಲ್ಲಿ ಕೆಲಸ,
ಸಾಕೀನಃ ನ್ಯೂ ರೆಡಿ ಮನಿ ಇಮಾರತ್,
ಆರ್/53 ಕ್ಲೀಯರ್ ಮುಂಬೈ.
ಹಾಲಿ ವಾಸಃ ಐ.ಬಿಲ್ಡಿಂಗ್, ಪ್ಲಾಟ್ ನಂಬರ್ 09,
ಕೊನಾರ್ಕ ಪೂರಮ್ ಸೊಸೈಟಿ,
ಎನ್.ಆರ್ ಶೀತಲ್ ಪೆಟ್ರೋಲ್ ಪಂಪ್,
ಕೊಂಡವಾ, ಪುಣೆ, ಮಹಾರಾಷ್ಟ್ರ ಜಿಲ್ಲೆಃ 411048.

**ಅಪರಾಧಿಕ ಪ್ರಕ್ರಿಯಾ ಸಂಹಿತೆಯ ಕಲಂ 313 ಅಡಿಯಲ್ಲಿ ದಾಖಲು ಮಾಡಿಕೊಂಡ ಆರೋಪಿಯ ಹೇಳಿಕೆ**

ಪ್ರಶ್ನೆ.1: ನೀವು ಅಭಿಯೋಜಕರ ಪರ ಸಾಕ್ಷಿದಾರರ ಸಾಕ್ಷಿ ಹೇಳಿಕೆಯನ್ನು ಕೇಳಿದ್ದೀರಾ?
ಉತ್ತರಃ

ಪ್ರಶ್ನೆ.2: ಪ್ರಾಸಾ–1 ಕೃಷ್ಣ ಹರಿಕಂತ್ರ ರವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 13–11–2023 ರಂದು ತಾನು ಮನೆಯಿಂದ ಮಂಕಿಯಲ್ಲಿರುವ ಅಜ್ಜಿಮನೆಗೆ ಬೈಕಿನಲ್ಲಿ ಹೋಗುತ್ತಿದ್ದಾಗ ತನ್ನ ಸ್ನೇಹಿತನಾದ ವಿನಾಯಕ ಹರಿಕಂತ್ರರವರು ಇನ್ನೊಂದು ಬೈಕಿನಲ್ಲಿ ಮಂಕಿ ಕಡೆಗೆ ಬರುತ್ತಿದ್ದು ಆತನ ಜೊತೆಯಲ್ಲಿ ಶರತ್ ಎಂಬುವವರು ಬೈಕಿನ ಹಿಂಬದಿಯಲ್ಲಿ ಕುಳಿತಿದ್ದು ಬೈಕನ್ನು ವಿನಾಯಕ ಚಲಾಯಿಸುತ್ತಿದ್ದು ಸಂಜೆ 06–50 ರ ಸಮಯದಲ್ಲಿ ಕರ್ಕಿ ರೈಲ್ವೆ ಸ್ಟೇಶನ್ ಹತ್ತಿರ ಹೋಗುತ್ತಿದ್ದಾಗ ಹೊನ್ನಾವರ ಕಡೆಯಿಂದ ಕುಮಟಾ ಕಡೆಗೆ ಒಂದು ಕಾರು ವೇಗವಾಗಿ ಬರುತ್ತಿದ್ದು ಕಾರಿನ ಚಾಲಕ ಕಾರಿಗೆ ಯಾವುದೇ ಇಂಡಿಕೇಟರನ್ನು ಹಾಕದೇ ರೈಲ್ವೆ ಸ್ಟೇಶನ್ ಕಡೆಗೆ ಹೋಗಲು ಏಕಾ ಏಕಿ ಬಲಕ್ಕೆ ತಿರುಗಿಸಿರುವುದಾಗಿ ಸಾಕ್ಷಿ ನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?
ಉತ್ತರಃ

ಪ್ರಶ್ನೆ3: ಫ್ರಾಸಾ-1ರವರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಆ ವೇಳೆಗೆ ಕುಮಟಾ ಕಡೆಯಿಂದ ಬರುತ್ತಿದ್ದ ವಿನಾಯಕರವರು ಎದುರಿನಲ್ಲಿ ಬರುತ್ತಿದ್ದ ಕಾರು ಏಕಾಏಕಿ ಬಲಕ್ಕೆ ತಿರುಗಿಸಿಕೊಂಡಾಗ ಅವರೂ ಸಹ ಬೈಕನ್ನು ಬಲಕ್ಕೆ ತೆಗೆದುಕೊಂಡಿದ್ದು ಆದರೂ ಕಾರು ಚಾಲಕ ಬಲಕ್ಕೆ ತಿರುಗಿಸುವಾಗ ವಿನಾಯಕರವರ ಬೈಕಿಗೆ ಡಿಕ್ಕಿಪಡಿಸಿರುವುದಾಗಿ ಸಾಕ್ಷಿ ನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ4: ಫ್ರಾಸಾ-1ರವರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ ಬೈಕಿನಲ್ಲಿದ್ದವರು ಕೆಳಗೆ ಬಿದ್ದಿದ್ದು, ತಾನು ಹೋಗಿ ನೋಡಲಾಗಿ ವಿನಾಯಕರವರ ತಲೆಗೆ ಪೆಟ್ಟು ಬಿದ್ದು ಕಿವಿಯಲ್ಲಿ ರಕ್ತ ಬರುತ್ತಿದ್ದು, ಶರತ್‌ರವರ ಕಣ್ಣಿನ ಹತ್ತಿರ ಗಾಯ ಆಗಿರುವುದಾಗಿ ಸಾಕ್ಷಿ ನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ5: ಫ್ರಾಸಾ-1ರವರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ತಾನು ಕಾರು ನೋಡಲಾಗಿ ನ್ಯಾಯಾಲಯದ ಮುಂದಿರುವ ಆರೋಪಿಯಾದ ನೀವು ಕಾರಿನ ಚಾಲಕರಾಗಿರುವುದಾಗಿ ಸಾಕ್ಷಿ ನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ6: ಫ್ರಾಸಾ-1ರವರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಗಾಯಾಳುಗಳನ್ನು ಹೊನ್ನಾವರದ ಸರಕಾರಿ ಆಸ್ಪತ್ರೆಗೆ ಸೇರಿಸಿ ಪೋಲೀಸ್ ಠಾಣೆಗೆ ಹೋಗಿ ದೂರು ನೀಡಿರುವುದಾಗಿ ಸಾಕ್ಷಿ ನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ7: ಫ್ರಾಸಾ-1ರವರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಶರತ್‌ರವರನ್ನು ಹೆಚ್ಚಿನ ಚಿಕಿತ್ಸೆಗೆ ಕಾರವಾರಕ್ಕೆ ಕರೆದುಕೊಂಡು ಹೋಗಿದ್ದು, ವಿನಾಯಕರವರನ್ನು ಉಡುಪಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಫಲಕಾರಿಯಾಗದೇ ವಿನಾಯಕ 3 ದಿನಗಳ ನಂತರ ಮೃತಪಟ್ಟಿರುವುದಾಗಿ ಸಾಕ್ಷಿ ನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ8: ಫ್ರಾಸಾ-1ರವರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಅಪಘಾತ ಆದ ಮರು ದಿನ ಪೋಲಿಸರು ಘಟನಾ ಸ್ಥಳಕ್ಕೆ ತನ್ನನ್ನು ಕರೆಸಿದ್ದು ತಾನು ತೋರಿಸಿದ ಅಪಘಾತದ ಸ್ಥಳದಲ್ಲಿ ಚಾಸಾ-2 ಮತ್ತು 3ರ ಸಮಕ್ಷಮ ಪೋಲಿಸರು ಸ್ಥಳ ಪಂಚನಾಮೆ ಮಾಡಿ, ಕಚ್ಚಾ ನಕಾಶೆ ತಯಾರಿಸಿ, ಸ್ಥಳದಲ್ಲಿ ಮೂರು ಫೋಟೋ ತೆಗೆದಿರುವುದಾಗಿ ಸಾಕ್ಷಿ ನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ.9: ಫ್ರಾಸಾ-1 ರವರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ತದನಂತರ ಪೋಲಿಸರು ಠಾಣೆಗೆ ಕರೆಸಿ ಠಾಣೆಯಲ್ಲಿ ಅಪಘಾತಕ್ಕೊಳಗಾದ ಕಾರು ಮತ್ತು ಬೈಕು ಇದ್ದು ತಾನು ಅವುಗಳನ್ನು ಗುರುತಿಸಿದ್ದು, ಪೋಲಿಸರು ಅವುಗಳನ್ನು ಫೋಟೋ ತೆಗೆದು ಅಮಾನತ್ತುಪಡಿಸಿಕೊಂಡಿರುವುದಾಗಿ ಸಾಕ್ಷಿ ನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ.10: ಫ್ರಾಸಾ-1 ರವರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಅಪಘಾತಪಡಿಸಿದ ಕಾರಿನ ಚಾಲಕನನ್ನು ನೋಡಿದರೆ ಗುರುತಿಸುತ್ತೇನೆ ಎಂಬುದಾಗಿ ಹೇಳಿ ನ್ಯಾಯಾಲಯದ ಮುಂದೆ ಇರುವ ಆರೋಪಿಯಾದ ನಿಮ್ಮನ್ನು ನೋಡಿ ಗುರುತಿಸಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ.11: ಫ್ರಾಸಾ-1 ರವರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ ಆರೋಪಿಯು ಕಾರನ್ನು ವೇಗವಾಗಿ ಚಲಾಯಿಸಿಕೊಂಡು ಬಂದು ಇಂಡಿಕೇಟರ್ ಹಾಕದೇ ಏಕಾಏಕಿ ಬಲಕ್ಕೆ ತಿರುಗಿಸಿದ್ದರಿಂದ ಆರೋಪಿ ತಪ್ಪಿನಿಂದ ಅಪಘಾತವಾಗಿರುವುದಾಗಿ ಸಾಕ್ಷಿ ನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ.12: ಫ್ರಾಸಾ-2 ಶರತ್ ದುರ್ಗೇಕರ್ ರವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 13-11-2023 ರಂದು ಸಂಜೆ 06-15 ರ ವೇಳೆಗೆ ಧಾರೇಶ್ವರದಿಂದ ಮಂಕಿಯಲ್ಲಿರುವ ಮಾವನಮನೆಗೆ ಹೋಗಲು ತಾನು ಮತ್ತು ತನ್ನ ಸ್ನೇಹಿತ ಮೃತ ವಿನಾಯಕ ಬೈಕಿನಲ್ಲಿ ಹೋಗುತ್ತಿದ್ದು, ಬೈಕನ್ನು ವಿನಾಯಕ ಓಡಿಸುತ್ತಿದ್ದು, ಬೈಕಿನ ಹಿಂಭಾಗದಲ್ಲಿ ತಾನು ಕುಳಿತಿದ್ದು ಸಂಜೆ 06-45 ರ ಸಮಯದಲ್ಲಿ ತಾವು ಕರ್ಕಿ ರೈಲ್ವೇ ಸ್ಟೇಶನ್ ಹತ್ತಿರ ಹೋಗುತ್ತಿದ್ದಾಗ ಹೊನ್ನಾವರ ಕಡೆಯಿಂದ ಕುಮಟಾ ಕಡೆಗೆ ಒಂದು ಕಾರು ವೇಗವಾಗಿ ಬರುತ್ತಿದ್ದು, ಕಾರಿನ ಚಾಲಕ ಕಾರಿಗೆ ಯಾವುದೇ ಇಂಡಿಕೇಟರನ್ನು ಹಾಕದೇ ರೈಲ್ವೆ ಸ್ಟೇಶನ್ ಕಡೆಗೆ ಹೋಗಲು ಏಕಾ ಏಕಿ ಬಲಕ್ಕೆ ತಿರುಗಿಸಿ ತಾವು ಹೋಗುತ್ತಿದ್ದ ಬೈಕಿಗೆ ಡಿಕ್ಕಿಪಡಿಸಿರುವುದಾಗಿ ಸಾಕ್ಷಿ ನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ.13: ಫ್ರಾಸಾ-2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಅಪಘಾತ ಆದ ನಂತರ ತಾನು ರಸ್ತೆಯ ಮೇಲೆ ಬಿದ್ದಿದ್ದು ತಲೆಗೆ ಪೆಟ್ಟಾಗಿದ್ದು, ವಿನಾಯಕನಿಗೂ ತಲೆಗೆ ಪೆಟ್ಟಾಗಿರುವುದಾಗಿ ಸಾಕ್ಷಿ ನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ14: ಫ್ರಾಸಾ–2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಸದರಿ ಕಾರನ್ನು ನ್ಯಾಯಾಲಯದ ಮುಂದಿರುವ ಆರೋಪಿಯಾದ ನೀವು ಚಲಾಯಿಸುತ್ತಿರುವುದಾಗಿ ಸಾಕ್ಷಿ ನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ15: ಫ್ರಾಸಾ–2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಹೊನ್ನಾವರ ಆಸ್ಪತ್ರೆಗೆ ಕರೆದುಕೊಂಡು ಬಂದ ನಂತರ ತನಗೆ ಪ್ರಜ್ಞೆ ಬಂದಿದ್ದು, ತನ್ನನ್ನು ಕಾರವಾರ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು ವಿನಾಯಕರವರನ್ನು ಉಡುಪಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು, ಆದರೆ ಚಿಕಿತ್ಸೆ ಫಲಕಾರಿಯಾಗದೇ ವಿನಾಯಕ 3 ದಿನಗಳ ನಂತರ ಮೃತಪಟ್ಟಿರುವುದಾಗಿ ಸಾಕ್ಷಿ ನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ16: ಫ್ರಾಸಾ–2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಅಪಘಾತಪಡಿಸಿದ ಕಾರಿನ ಚಾಲಕನನ್ನು ನೋಡಿದರೆ ಗುರುತಿಸುತ್ತೇನೆ ಎಂಬುದಾಗಿ ಹೇಳಿ ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ17: ಫ್ರಾಸಾ–2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಆರೋಪಿಯು ಕಾರನ್ನು ವೇಗವಾಗಿ ಚಲಾಯಿಸಿಕೊಂಡು ಬಂದು ಇಂಡಿಕೇಟರ್ ಹಾಕದೇ ಏಕಾಏಕಿ ಬಲಕ್ಕೆ ತಿರುಗಿಸಿದ್ದರಿಂದ ಆರೋಪಿ ತಪ್ಪಿನಿಂದ ಅಪಘಾತವಾಗಿರುವುದಾಗಿ ಸಾಕ್ಷಿ ನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ18: ಫ್ರಾಸಾ–4 ಶಶಿಧರ ನಾಗಪ್ಪ ಹರಿಕಂತ್ರ ರವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 14–11–2023ರಂದು ಬೆಳಿಗ್ಗೆ 11–00 ರಿಂದ 12–00 ಗಂಟೆ ಸಮಯದಲ್ಲಿ ಕರ್ಕಿ ಗ್ರಾಮದ ರಾಷ್ಟ್ರೀಯ ಹೆದ್ದಾರಿಯ ರೈಲ್ವೆ ಸ್ಟೇಶನ್ ಕ್ರಾಸನಲ್ಲಿ ಅಪಘಾತ ಆದ ವಿಚಾರವಾಗಿ ಪೋಲಿಸರು ಸ್ಥಳ ಪಂಚನಾಮೆಗೆ ಬಂದಿದ್ದು ಚಾಸಾ–1ರವರು ತೋರಿಸಿದ ಅಪಘಾತದ ಸ್ಥಳದಲ್ಲಿ ತನ್ನ ಮತ್ತು ಚಾಸಾ–2ರ ಸಮಕ್ಷಮ ಪೋಲಿಸರು ಸ್ಥಳ ಪಂಚನಾಮೆ ಮಾಡಿ, ಸ್ಥಳದಲ್ಲಿ ಒಂದು ನಕಾಶೆ ತಯಾರಿಸಿ, ಮೂರು ಫೋಟೋ ತೆಗೆದಿರುವುದಾಗಿ ಸಾಕ್ಷಿ ನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ19: ಫ್ರಾಸಾ–4 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ತದನಂತರ ಪೋಲಿಸರು ತಮ್ಮನ್ನು ಠಾಣೆಗೆ ಕರೆಸಿದ್ದು ಠಾಣೆಯಲ್ಲಿ ಅಪಘಾತಕ್ಕೊಳಗಾದ ಕಾರು ಮತ್ತು ಬೈಕು ಇದ್ದು ಚಾಸಾ–1ರವರು

ಅವುಗಳನ್ನು ಗುರುತಿಸಿದ್ದು ಪೋಲಿಸರು ಅವುಗಳನ್ನು ಫೋಟೋ ತೆಗೆದು ಅಮಾನತ್ತುಪಡಿಸಿಕೊಂಡಿರುವುದಾಗಿ ಸಾಕ್ಷಿ ನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?
ಉತ್ತರಃ

ಪ್ರಶ್ನೆ20: ಫ್ರಾಸಾ–6 ಸಿಪಿಐ ಸುರೇಶ ಕುಂಬಾರ್ ರವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 08–02–2024 ರಂದು ಕೇಸಿನ ಕಡತವನ್ನು ಚಾಸಾ–19 ರಿಂದ ಪಡೆದುಕೊಂಡು ದಿನಾಂಕ 15–03–2024 ರಂದು ಪ್ರಕರಣದ ಗಾಯಾಳುಗಳಾದ ಚಾಸಾ–6 ಮತ್ತು ಇತರೇ ಇಬ್ಬರ ಗಾಯದ ಪ್ರಮಾಣಪತ್ರಗಳನ್ನು ಪಡೆದುಕೊಂಡು ತನಿಖೆ ಪೂರ್ಣಗೊಂಡಿದ್ದರಿಂದ ಆರೋಪಿ ವಿರುದ್ಧ ಅದೇ ದಿನ ದೋಷಾರೋಪಣ ಪಟ್ಟಿ ಸಲ್ಲಿಸಿರುವುದಾಗಿ ಸಾಕ್ಷಿ ನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?
ಉತ್ತರಃ

ಪ್ರಶ್ನೆ21: ಫ್ರಾಸಾ–7 ಮುರ್ಡೇಶ್ವರ ವೃತ್ತದ ಪೊಲೀಸ್ ವೃತ್ತ ನಿರೀಕ್ಷಕರಾದ ಸಂತೋಷ ಕಾಯ್ಕಿಣಿ ರವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 20–11–2023 ರಂದು ಕೇಸಿನ ಕಡತವನ್ನು ಚಾಸಾ–18 ರಿಂದ ಪಡೆದುಕೊಂಡು ಐ ಎಂ ವಿ ವರದಿ ಹಾಗೂ ದಿಃ 10–12–2023 ರಂದು ಚಾ.ಸಾ. 6 ರವರ ಹೇಳಿಕೆಯನ್ನು ಪಡೆದಿರುವುದಾಗಿ ಸಾಕ್ಷಿ ನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?
ಉತ್ತರಃ

ಪ್ರಶ್ನೆ22: ಫ್ರಾಸಾ–7 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿಃ 23–12–2023 ರಂದು ಅಪಘಾತಕ್ಕೆ ಒಳಗಾಗಿದ್ದ ಮೋಟಾರ್ ಸೈಕಲ್ ಮಾಲೀಕರು ಠಾಣೆಗೆ ಹಾಜರಾಗಿದ್ದು, ಅವರಿಗೆ ಕಲಂ 133 ರಡಿಯಲ್ಲಿ ನೊಟೀಸ್ ನೀಡಿ ಅವರಿಂದ ಉತ್ತರವನ್ನು ಪಡೆದು ಇಂಡೆಮ್ನಿಟಿ ಬಾಂಡ್ ಪಡೆದು ಮೋಟಾರ್ ಸೈಕಲನ್ನು ಅವರ ಸ್ವಾಧೀನಕ್ಕೆ ನೀಡಿರುವುದಾಗಿ ಸಾಕ್ಷಿ ನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?
ಉತ್ತರಃ
ಪ್ರಶ್ನೆ23: ಫ್ರಾಸಾ–7 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿಃ 05–01–2024 ರಂದು ಮೃತ ಶಂಕರ ರವರ ಪಿ ಎಂ ವರದಿಯನ್ನು ಪಡೆದು ನಂತರ ದಿಃ 08–02–2024 ರವರು ಕೇಸಿನ ಕಡತವನ್ನು ಚಾ.ಸಾ. 20 ರವರಿಗೆ ವಹಿಸಿರುವುದಾಗಿ ಸಾಕ್ಷಿ ನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?
ಉತ್ತರಃ

ಪ್ರಶ್ನೆ24: ಫ್ರಾಸಾ–8 ರಾಮನಗರ ಪೊಲೀಸ್ ಠಾಣೆಯ ಆರಕ್ಷಕ ಉಪ–ನಿರೀಕ್ಷಕರಾದ ಮಹಾಂತೇಶ ನಾಯ್ಕ ರವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 13–11–2023 ರಂದು ತಾನು ಠಾಣಾ ಪ್ರಭಾರದಲ್ಲಿದ್ದಾಗ ರಾತ್ರಿ 07–00 ಗಂಟೆಗೆ ಪಿರ್ಯಾದುದಾರರು ಠಾಣೆಗೆ ಹಾಜರಾಗಿ ನೀಡಿದ ದೂರನ್ನು ಪಡೆದುಕೊಂಡು ಠಾಣಾ ಮೊಕದ್ದಮೆ ನಂ.226/2023 ರಂತೆ ಪ್ರಕರಣ ದಾಖಲಿಸಿ ಪ್ರಥಮ ವರ್ತಮಾನ ವರದಿಯನ್ನು

ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುವುದಾಗಿ ಸಾಕ್ಷಿ ನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ25: ಫ್ರಾಸಾ-8 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 14-11-2023 ರಂದು ಘಟನಾ ಸ್ಥಳಕ್ಕೆ ಭೇಟಿ ನೀಡಿ ಚಾಸಾ-1 ರವರು ತೋರಿಸಿದ ಸ್ಥಳದಲ್ಲಿ ಪಂಚರ ಸಮಕ್ಷಮ ಬೆಳಿಗ್ಗೆ 11-00 ರಿಂದ 12-00 ಗಂಟೆ ಸಮಯದಲ್ಲಿ ಸ್ಥಳ ಪಂಚನಾಮೆ ಮತ್ತು ಕಚ್ಚಾ ನಕಾಶೆ ತಯಾರಿಸಿ ಸ್ಥಳದ ಫೋಟೋ ತೆಗೆಸಿರುವುದಾಗಿ ಸಾಕ್ಷಿ ನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ26: ಫ್ರಾಸಾ-8 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಅದೇ ದಿನ ಮಧ್ಯಾಹ್ನ 12-30 ರಿಂದ 01-30 ರ ಸಮಯದಲ್ಲಿ ಠಾಣಾ ಆವರಣದಲ್ಲಿ ನಿಲ್ಲಿಸಿದ್ದ ಅಪಘಾತಕ್ಕೊಳಗಾಗಿದ್ದ ಕಾರು ಮತ್ತು ಬೈಕನ್ನು ಚಾಸಾ-1 ರವರು ಗುರುತಿಸಿದ್ದು ಅದೇ ಪಂಚರ ಸಮಕ್ಷಮ ಪಂಚನಾಮೆ ಅಡಿಯಲ್ಲಿ ಕಾರು ಮತ್ತು ಬೈಕನ್ನು ಅಮಾನತ್ತುಪಡಿಸಿಕೊಂಡು ಫೋಟೋ ತೆಗೆಸಿ, ಅದೇ ದಿನ ಚಾಸಾ-7 ಮತ್ತು 8 ರವರ ಹೇಳಿಕೆ ಪಡೆದಿರುವುದಾಗಿ ಸಾಕ್ಷಿ ನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ27: ಫ್ರಾಸಾ-8 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 14-11-2023 ರಂದು ಕಾರು ಮಾಲೀಕರಿಗೆ ಕಲಂ 133 ರಡಿಯಲ್ಲಿ ನೋಟೀಸು ನೀಡಿ ಉತ್ತರ ಪಡೆದು ಅದೇ ದಿನ ಮಾಲೀಕರಿಂದ ಇಂಡೆಮ್ನಿಟಿ ಬಾಂಡ್ ಪಡೆದುಕೊಂಡು ಕಾರನ್ನು ಇಮ್ರಾನ್ ಖಾನ್ ರವರ ಸ್ವಾದೀನಕ್ಕೆ ನೀಡಿರುವುದಾಗಿ ಸಾಕ್ಷಿ ನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ28: ಫ್ರಾಸಾ-8 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಅದೇ ದಿನ ಅಪಘಾತಪಡಿಸಿದ ಆರೋಪಿಯನ್ನು ಬಂಧಿಸಿ ಜಾಮೀನಿನ ಮೇಲೆ ಆತನನ್ನು ಬಿಡುಗಡೆ ಮಾಡಿರುವುದಾಗಿ ಸಾಕ್ಷಿ ನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ29: ಫ್ರಾಸಾ-8 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಅದೇ ದಿನ ಚಾಸಾ-14 ರವರಿಂದ ಕಲಂ 65-ಬಿ ಪ್ರಮಾಣಪತ್ರವನ್ನು ಪಡೆದುಕೊಂಡಿರುವುದಾಗಿ ಸಾಕ್ಷಿ ನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ30: ಫ್ರಾಸಾ-8 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 16-11-2023 ರಂದು ಅಪಘಾತದ ಗಾಯಾಳು ಮೃತಪಟ್ಟಿದ್ದು ಈ ಬಗ್ಗೆ ಉಡುಪಿ ನಗರ ಠಾಣೆಯಿಂದ ಇ-ಮೇಲ್ ಬಂದಿದ್ದರಿಂದ ಅದನ್ನು ಕಡತಕ್ಕೆ ಅಳವಡಿಸಿ ಕಲಂ 304 ಎ ರಡಿಯಲ್ಲಿ ತನಿಖೆ ನಡೆಸಲು ಮಾನ್ಯ ನ್ಯಾಯಾಲಯಕ್ಕೆ ಅನುಮತಿ ಕೋರಿ ಮನವಿ ಸಲ್ಲಿಸಿರುವುದಾಗಿ ಸಾಕ್ಷಿ ನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ31: ಫ್ರಾಸಾ-8 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಅದೇ ದಿನ ಮೃತನ ಶವ ಪಂಚನಾಮೆಯನ್ನು ತಯಾರಿಸಿಕೊಂಡು ಬರುವಂತೆ ಚಾಸಾ-17 ರವರಿಗೆ ಜ್ಞಾಪನ ನೀಡಿದ್ದು, ಅದರಂತೆ ಸದರಿಯವರು ಮೃತನ ಶವತನಿಖಾ ವರದಿಯನ್ನು ತಯಾರಿಸಿ ತನಗೆ ಹಾಜರುಪಡಿಸಿದ್ದು, ಅದನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿದ್ದು, ಅದೇ ದಿನ ಚಾಸಾ-1, 7 ಮತ್ತು 8 ರವರ ಮರುಹೇಳಿಕೆ ಪಡೆದಿರುವುದಾಗಿ ಸಾಕ್ಷಿ ನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ32: ಫ್ರಾಸಾ-8 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 18-11-2023 ರಂದು ಚಾಸಾ-15 ರವರಿಂದ ಕಲಂ 65-ಬಿ ಪ್ರಮಾಣಪತ್ರವನ್ನು ಪಡೆದುಕೊಂಡುನಂತರ ಕೇಸಿನ ಕಡತವನ್ನು ಚಾಸಾ-19 ರವರಿಗೆ ವಹಿಸಿರುವುದಾಗಿ ಸಾಕ್ಷಿ ನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ33. ನೀವು ಹೇಳುವುದಾದರು ಏನು ಇದೆಯೇ?

ಉತ್ತರಃ

ಪ್ರಶ್ನೆ 34. ನಿಮ್ಮ ಪರವಾಗಿ ಯಾವುದಾದರೂ ಮೌಖಿಕ ಅಥವಾ ದಾಖಲಾತಿ ಸಾಕ್ಷ್ಯ ಇರುತ್ತದೆಯೇ?
**ಉತ್ತರಃ**

(ವಿಹಿತ ಹೇಳಿಕೆಯನ್ನ ಆರೋಪಿತರಿಗೆ ಗೊತ್ತಿರುವ ಕನ್ನಡ ಭಾಷೆಯಲ್ಲಿ ಓದಿ ವಿವರಿಸಿ ಹೇಳಲಾಯಿತು. ಕೇಳಿದ ಪ್ರಶ್ನೆಗಳಿಗೆ ಆರೋಪಿತರು ನೀಡಿರುವ ಉತ್ತರಗಳನ್ನ ನನ್ನ ಸ್ವಹಸ್ತಾಕ್ಷರಗಳಿಂದ ಬರೆದುಕೊಳ್ಳಲಾಗಿರುತ್ತದೆ.)

Sd/-

**ಸ್ಥಳಃ ಹೊನ್ನಾವರ** **ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರು ಮತ್ತು**
**ದಿನಾಂಕಃ 23-10-2025** **ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**